DITTO WS

Reg. No. : ....................................

Name : ........................................

**FY-316**

## FIRST YEAR HIGHER SECONDARY MODEL EXAMINATION – 2021

Part – III

**KANNADA (Optional)**

Maximum : 80 Scores

Time : **2½** Hours

Cool-off time : **20** Minutes

**ವಿದ್ಯಾರ್ಥಿಗಳಿಗೆ ಸೂಚನೆಗಳು :**

- ಮೊದಲ **20** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.

**1 ರಿಂದ 4 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

1. ಜೇಡರ ದಾಸಿಮಯ್ಯನ ಅಂಕಿತ ಯಾವುದು ?

   (ರಾಮನಾಥ, ಕೂಡಲ ಸಂಗಮದೇವ, ಚೆನ್ನಮಲ್ಲಿಕಾರ್ಜುನ, ಸದಾಶಿವಗುರು)

2. 'ಬೇವು ಬೆಲ್ಲದೊಳಿಡಲೇನು ಫಲ' – ಇದು ಯಾರು ಬರೆದ ಕೀರ್ತನೆಯಾಗಿದೆ ?

   (ಕನಕದಾಸ, ಪುರಂದರದಾಸ, ಹೆಳವನಕಟ್ಟೆ ಗಿರಿಯಮ್ಮ, ವಾದಿರಾಜ)

3. ಈ ಕೆಳಗಿನವುಗಳಲ್ಲಿ ಜನಪದ ಪ್ರಕಾರಕ್ಕೆ ಸೇರಿದ ಪಾಠಭಾಗ ಯಾವುದು ?

   (ಅಳಿಮನದ ಭಕ್ತಿ, ಮಳೆಯ ದಯಮಾಡೋ, ಕಣ್ಣ ಮುಂದೈತೆ ಕೈಲಾಸ, ಅಶ್ವತ್ಥಾಮ)

4. ಕನ್ನಡದ ಪ್ರಥಮ ರಾಷ್ಟ್ರಕವಿಯೆಂದು ಪ್ರಸಿದ್ಧರಾದವರು ಯಾರು ?

   (ದ.ರಾ. ಬೇಂದ್ರೆ, ಗೋವಿಂದ ಪೈ, ಸು.ರಂ. ಎಕ್ಕುಂಡಿ, ಕೆ.ಎಸ್. ನರಸಿಂಹಾಚಾರ್)

DITTO WS

**5 ರಿಂದ 12 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ. (4 × 1 = 4)**

5. ತೃಷೆ – ಈ ಪದದ ಅರ್ಥವನ್ನು ಬರೆಯಿರಿ.

6. ಮಾರ್ತಂಡನುದಯಿಸಿದಂ – ಈ ಪದವನ್ನು ವಿಂಗಡಿಸಿ ಬರೆಯಿರಿ.

7. ನೀರು – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ.

8. ಭಕ್ತಿ – ಈ ಸಂಸ್ಕೃತ ಪದದ ತದ್ಭವ ರೂಪವನ್ನು ಬರೆಯಿರಿ.

9. 'ನೀರ್ಕುಡಿದು ಮೈ ತೊಳೆದುಕೊಂಡೆನು' – ಭೂತಕಾಲದಲ್ಲಿರುವ ಈ ವಾಕ್ಯವನ್ನು ಭವಿಷ್ಯತ್ ಕಾಲ ರೂಪದಲ್ಲಿ ಬರೆಯಿರಿ.

10. 'ಪೆಂಟಯ್ಯನು ಗಿರಾಕಿಗಳ ಮನೆಗೆ ಇದ್ದಿಲು ಸಪ್ಲೈ ಮಾಡುತ್ತಿದ್ದನು.' – ಈ ವಾಕ್ಯದಲ್ಲಿ ಬಂದಿರುವ ಅನ್ಯದೇಶೀಯ ಪದವನ್ನು ಗುರುತಿಸಿ ಬರೆಯಿರಿ.

11. 'ವೈಶಾಖ ಪೂರ್ಣಮಿಯ ಮಾರ್ತಂಡನುದಯಿಸಿದಂ' ಕಾವ್ಯಭಾಗದಲ್ಲಿ ಕಾಣಿಸುವ ಬುದ್ಧನ ಹೆಸರುಗಳಲ್ಲಿ ಒಂದನ್ನು ಬರೆಯಿರಿ.

12. ಅನುಕರಣವಾಚಿ ಪದಕ್ಕೆ ಒಂದು ಉದಾಹರಣೆ ಕೊಡಿರಿ.

**13 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. (3 × 3 = 9)**

13. ಕೆಳಗೆ ಕೊಡಲಾದ ಮಿಶ್ರವಾಕ್ಯವನ್ನು ಮೂರು ಸರಳವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ನಾದಿರಾ ಸೆರಗಿನಿಂದ ಕಣ್ಣೊರೆಸಿಕೊಳ್ಳುತ್ತಾ ತನ್ನ ಕೋಣೆಗೆ ನಡೆದು ಹಾಸಿಗೆಯ ಮೇಲೆ ಬಿದ್ದುಕೊಂಡು ಮಗುವನ್ನು ನೋಡುತ್ತಲೂ ಆಕೆಗೆ ಪುನಃ ಕಣ್ಣೀರುಕ್ಕಿತು.

14. ಕೆಳಗೆ ಕೊಡಲಾದ ಗ್ರಾಮ್ಯ ಭಾಷೆಯ ಗದ್ಯಭಾಗವನ್ನು ಶಿಷ್ಟಕನ್ನಡಕ್ಕೆ ಬದಲಾಯಿಸಿ ಬರೆಯಿರಿ.

ಉಗಾದಿ ಕಳೆದ ಹತ್ತ ಹನ್ನೆರಡ ದಿವ್ಯ ಆಗಿರಭೌದು. ಅವತ್ತ ಮುಂಜಾಲಿಸುಟ್ಟು ಕಿತ್ತೂರ ಬಸ್ಟಾಂಡದಾಗ ಯಿಪರೀತ ಗದ್ದಲ ಗೌಜಿ. ಒಬ್ಬಾಕಿ ಹರೇದ ಹೆಣಮಗಳು ಹೊಸ ಇಳಕಲ್ ಸೀರಿ ಉಟಗೊಂಡ, ರಬಕವಿ ಕಣದ ಕುಬಸಾ ತೊಟ್ಟು ನಿಂತಿದ್ಲು.

15. 'ಬೆಳ್ಳಗಿರುವುದೆಲ್ಲ ಹಾಲಲ್ಲ' – ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

16. ನಾವು ಆಡುವ ಮಾತು ಹೇಗಿರಬೇಕೆಂದು ಬಸವಣ್ಣನವರು ಹೇಳುತ್ತಾರೆ ?

17. ಬಂಗಾರ ಬಳಿಯಿದ್ರೆ ಬೈಬ್ಯಾಡ ಬಡವರಿಗೆ
ಬಂಗಾರ ನಿನಗೆ ಸ್ಥಿರವಲ್ಲ – ಮಧ್ಯಾಹ್ನದ
ಬಿಸಿಲು ಹೊರಳುವುದು ತಡವಲ್ಲ.

ಈ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ.

18. ನೀರು ದೊರೆಯದೆ ಕಷ್ಟಪಡುವ ಹೆಂಗಸರ ಸ್ಥಿತಿಯನ್ನು 'ಮಳೆಯ ದಯಮಾಡೋ' – ಕೀರ್ತನೆಯಲ್ಲಿ ಯಾವ ರೀತಿ ಹೇಳಲಾಗಿದೆ ?

**19 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. (3 × 4 = 12)**

19. ಸರಿ ಹೊಂದಿಸಿ ಬರೆಯಿರಿ.

| 'ಅ' ವಿಭಾಗ | 'ಆ' ವಿಭಾಗ |
|---|---|
| ಶ್ರೀನಿವಾಸ ವೈದ್ಯ | ಪೆಂಟಯ್ಯನ ಅಂಗಿ |
| ಕೆ.ವಿ. ತಿರುಮಲೇಶ್ | ಅಶ್ವತ್ಥಾಮ |
| ಸು.ರಂ. ಎಕ್ಕುಂಡಿ | ಚಂದ್ರಗಿರಿಯ ತೀರದಲ್ಲಿ |
| ಸಾರಾ ಅಬೂಬಕ್ಕರ್ | ಬಾಶಿಂಗ ಬಲ |

DITTO
WS

20. ಕೆಳಗೆ ನೀಡಲಾದ ವಚನದ ಸ್ವಾರಸ್ಯವನ್ನು ಬರೆಯಿರಿ.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ

ಇರುಳೆಲ್ಲಾ ನಡೆದನಾ ಸುಂಕಕಂಜಿ.

ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು

ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ

21. ಪೆಂಟಯ್ಯನ ಅಂಗಿಯ ವಿಚಾರ ಹೇಳುವುದರ ಮೂಲಕ ಅವನ ಬಡತನದ ಜೀವನ ಸ್ಥಿತಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆ ? ಬರೆಯಿರಿ.

22. ಕೊರೋನಾ ಮಹಾಮಾರಿಯು ಈಗ ಎಲ್ಲೆಡೆಯೂ ವ್ಯಾಪಿಸುತ್ತಾ ಅಪಾಯವನ್ನು ತಂದೊಡ್ಡಿದೆ. ಈ ಕುರಿತು ಜನಜಾಗೃತಿ ಮೂಡಿಸುವ ಸಲುವಾಗಿ ಕರಪತ್ರವೊಂದನ್ನು ಬರೆದು ಸಿದ್ಧಪಡಿಸಿರಿ.

23. ‘ಬಾಶಿಂಗ ಬಲ’ ಎಂಬ ಶೀರ್ಷಿಕೆಯು ಆ ಕತೆಗೆ ಹೊಂದುತ್ತದೆಯೋ ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.

24. ಬಂಡಿಗಳ ಚಕ್ರದಿಂದ ಕದಡಿ ಕೆಸರಾದ ತೊರೆಯ ನೀರನ್ನು ತರಲು ಹೋದ ಆನಂದನಿಗೆ ಈಗ ಅದು ಹೇಗೆ ಕಾಣಿಸುತ್ತಿತ್ತೆಂದು ಕವಿ ವರ್ಣಿಸಿದ್ದಾರೆ ? ‘ವೈಶಾಖ ಪೂರ್ಣಿಮಿಯ ಮಾರ್ತಂಡನುದಯಿಸಿದಂ’ ಕಾವ್ಯ ಭಾಗದ ಆಧಾರದಲ್ಲಿ ಬರೆಯಿರಿ.

25. ರಶೀದ್ ಹಾಗೂ ನಾದಿರಾ ಅವರ ದಿನಚರಿ ಹೇಗಿತ್ತು ? ‘ಚಂದ್ರಗಿರಿಯ ತೀರದಲ್ಲಿ’ ಪಾಠಭಾಗದ ಆಧಾರದಲ್ಲಿ ಬರೆಯಿರಿ.

**26 ರಿಂದ 39 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಏಳು ಪ್ರಶ್ನೆಗಳಿಗೆ ಅರ್ಧಪುಟಕ್ಕೆ ಕಡಿಮೆಯಾಗದಂತೆ ಉತ್ತರ ಬರೆಯಿರಿ.** **(7 × 5 = 35)**

26. ಮನೆಗೆ ಬಂದ ಅತಿಥಿಗಳನ್ನು ಸ್ವೀಕರಿಸುವುದರ ಕುರಿತು ಬಸವಣ್ಣನವರು ತಮ್ಮ ವಚನದಲ್ಲಿ ಯಾವ ರೀತಿ ಹೇಳಿದ್ದಾರೆ ? ವಿವರಿಸಿ ಬರೆಯಿರಿ.

27. ನೀರಿನ ಅಭಾವದಿಂದಾಗಿ ಕಷ್ಟಪಡುವ ಹೆಂಗಸರ ಹಾಗೂ ಇತರ ಜೀವಿಗಳ ಕುರಿತು ಹೆಳವನಕಟ್ಟೆ ಗಿರಿಯಮ್ಮ ತಮ್ಮ 'ಮಳೆಯ ದಯಮಾಡೋ' ಕೀರ್ತನೆಯಲ್ಲಿ ಹೇಗೆ ಸ್ಪಂದಿಸಿದ್ದಾರೆ ? ವಿವರಿಸಿ ಬರೆಯಿರಿ.

28. 'ಕಣ್ಣ ಮುಂದ್ಯೆತಿ ಕೈಲಾಸ' ಜನಪದ ತ್ರಿಪದಿಗಳಲ್ಲಿ ಅತ್ತೆ – ಸೊಸೆ ಸಂಬಂಧ, ಬಡವರ ಕಷ್ಟ ಇತ್ಯಾದಿ ವಿಚಾರಗಳನ್ನು ಹೇಗೆ ಹೇಳಲಾಗಿದೆ ? ವಿವರಿಸಿ ಬರೆಯಿರಿ.

29. 'ಬಾಶಿಂಗ ಬಲ' ಕತೆಯಲ್ಲಿ ಕಾಣುವ ಹಳ್ಳಿಯ ಪರಿಸರ, ಆಡುಮಾತಿನ ಬಳಕೆಗಳು ಕತೆಯ ಸೊಗಸನ್ನು ಹೆಚ್ಚಿಸಿದೆಯೇ ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.

30. ಗೋವಿಂದ ಪೈಯವರು ಬುದ್ಧನ ಮಹಿಮೆಯನ್ನು ತಮ್ಮ ಕಾವ್ಯದಲ್ಲಿ ಹೇಗೆ ಸುಂದರವಾಗಿ ಚಿತ್ರಿಸಿದ್ದಾರೆ ? ವಿವರಿಸಿ ಬರೆಯಿರಿ.

31. ಬಡವರ ಕನಸುಗಳು ನನಸಾಗದೆ ಉಳಿವ ಧಾರುಣ ಸ್ಥಿತಿಯು 'ಪೆಂಟಯ್ಯನ ಅಂಗಿ' ಕವನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ ಬರೆಯಿರಿ.

32. ಸ್ತುತಿ – ನಿಂದೆಗಳು ಬಂದರೆ ಸಮಾಧಾನದಿಂದಿರಬೇಕೆಂದು ಅಕ್ಕಮಹಾದೇವಿ ತನ್ನ 'ಬೆಟ್ಟದ ಮೇಲೊಂದು ಮನೆಯ ಮಾಡಿ' ವಚನದಲ್ಲಿ ಯಾವೆಲ್ಲ ಉದಾಹರಣೆಗಳನ್ನು ನೀಡಿ ಸಮರ್ಥಿಸಿದ್ದಾಳೆ ? ವಿವರಿಸಿ ಬರೆಯಿರಿ.

33. ನಿಮ್ಮೂರಿನ ಕುಡಿವ ನೀರಿನ ಸಮಸ್ಯೆಗೆ ಪರಿಹಾರವನ್ನು ಒದಗಿಸುವಂತೆ ಆಗ್ರಹಿಸಿ ಗ್ರಾಮ ಪಂಚಾಯತು ಅಧ್ಯಕ್ಷರಿಗೆ ನೀಡಲು ಮನವಿ ಪತ್ರವೊಂದನ್ನು ತಯಾರಿಸಿರಿ.

34. ಉತ್ರಾಜಿಯ ಜೀವನವು ದುರಂತಮಯವಾಗಲು ಕಾರಣವೇನು ? ವಿವರಿಸಿ ಬರೆಯಿರಿ.

35. ಶಕುಂತಲೆಯ ಗುಣ ಸ್ವಭಾವಗಳು 'ಹೇಮಕೂಟದಿಂದ ಬಂದ ಮೇಲೆ' ಕತೆಯಲ್ಲಿ ಹೇಗೆ ಸುಂದರವಾಗಿ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

36. ಶ್ರಮಜೀವಿಗಳ ಜೀವನದಲ್ಲಿನ ಕಷ್ಟವು 'ಪೆಟ್ರೋಮ್ಯಾಕ್ಸ್ ಹೊತ್ತವರು' ಕವನದಲ್ಲಿ ಹೇಗೆ ಪ್ರತಿಬಿಂಬಿತವಾಗಿದೆ ? ವಿವರಿಸಿ ಬರೆಯಿರಿ.

37. ಆಧುನಿಕ ಸಮಾಜದಲ್ಲಿ ಮಕ್ಕಳ ಜೀವನ ರೀತಿ ಹಾಗೂ ಅದು ಹೆತ್ತವರಲ್ಲಿ ಉಂಟುಮಾಡುವ ಭಯ, ತಳಮಳಗಳನ್ನು 'ಬೆಳಸು' ಕವನದಲ್ಲಿ ಕವಯಿತ್ರಿ ಹೇಗೆ ಚಿತ್ರಿಸಿದ್ದಾರೆ ? ವಿವರಿಸಿ ಬರೆಯಿರಿ.

38. ಸತ್ಯವಂತರ ಸಂಗವಿರಲು ತೀರ್ಥವೇತಕೆ ಎಂಬ ಕೀರ್ತನೆಯ ಮೂಲಕ ಕನಕದಾಸರು ಸಮಾಜಕ್ಕೆ ನೀಡುವ ಸಂದೇಶವೇನು ? ವಿವರಿಸಿ ಬರೆಯಿರಿ.

39. ಚಂದ್ರಗುಪ್ತನ ಬುದ್ಧಿವಂತಿಕೆಯು ಪಂಜರ ಪರೀಕ್ಷೆ ಪಾಠಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

**40 ರಿಂದ 43 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರ ಬರೆಯಿರಿ.** **(2 × 8 = 16)**

40. ತನ್ನನ್ನು ತಾನು ತಿದ್ದಿಕೊಳ್ಳದೆ ಮಾಡುವ ಭಕ್ತಿ, ಆಚರಣೆಗಳೆಲ್ಲ ವ್ಯರ್ಥ ಎಂಬುದನ್ನು 'ಬೇವು ಬೆಲ್ಲದೊಳಿಡಲೇನು ಫಲ' ಕೀರ್ತನೆಯ ಆಧಾರದಲ್ಲಿ ವಿವರಿಸಿ ಬರೆಯಿರಿ.

41. 'ಚಂದ್ರಗಿರಿಯ ತೀರದಲ್ಲಿ' ಪಾಠಭಾಗದಲ್ಲಿ ಬಂದಿರುವ ನಾದಿರಾಳ ಪಾತ್ರ ಚಿತ್ರಣ ಮಾಡಿರಿ.

42. 'ಬಾಶಿಂಗ ಬಲ' ಕತೆಯಲ್ಲಿ ಹಳ್ಳಿಯ ಪರಿಸರದ ಮುಗ್ಧ ಮನಸ್ಸಿನ ಗಂಡು ಹೆಣ್ಣುಗಳಿಬ್ಬರ ಪ್ರಸಂಗವು ಗ್ರಾಮ್ಯ ಭಾಷೆಯಲ್ಲಿ ಹೇಗೆ ಸುಂದರವಾಗಿ ಚಿತ್ರಣಗೊಂಡಿದೆ ? ವಿವರಿಸಿ ಬರೆಯಿರಿ.

43. ಬಡತನದ ಕಷ್ಟವನ್ನು ಅನುಭವಿಸುತ್ತಿರುವ ಕುಟುಂಬವೊಂದರ ಧಾರುಣ ಚಿತ್ರಣ 'ಅಶ್ವತ್ಥಾಮ' ಕವನದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ ಬರೆಯಿರಿ.

---